SL. No. : OP

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 97-K**

**Code No. : 97-K**

# ವಿಷಯ : ರಾಜ್ಯಶಾಸ್ತ್ರ
# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 21. 06. 2017 ]
[ Date : 21. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ]
[ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ]
[ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ. ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ನಾವು ಗಣರಾಜ್ಯ ದಿನವೆಂದು ಪ್ರತಿವರ್ಷ ಆಚರಿಸುವುದು

   (A) ಆಗಸ್ಟ್ 15 ರಂದು

   (B) ಅಕ್ಟೋಬರ್ 2 ರಂದು

   (C) ನವಂಬರ್ 14 ರಂದು

   (D) ಜನವರಿ 26 ರಂದು

2. ಭಾರತ ಸಂವಿಧಾನದ ಈ ತಿದ್ದುಪಡಿಯು ಪ್ರಸ್ತಾವನೆಗೆ 'ಸಮಾಜವಾದ ಮತ್ತು ಜಾತ್ಯಾತೀತ' ಎಂಬ ಪದಗಳನ್ನು ಸೇರಿಸಿತು

   (A) 42ನೇ ತಿದ್ದುಪಡಿ

   (B) 67ನೇ ತಿದ್ದುಪಡಿ

   (C) 76ನೇ ತಿದ್ದುಪಡಿ

   (D) 52ನೇ ತಿದ್ದುಪಡಿ

3. ಕರ್ನಾಟಕದಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನಗೊಂಡ ವರ್ಷ

   (A) 2010

   (B) 2011

   (C) 2009

   (D) 2008

4. ಭಾರತದ ರಾಷ್ಟ್ರಪತಿಗಳು ಪ್ರಮಾಣ ವಚನ ಸ್ವೀಕರಿಸುವುದು

   (A) ಪ್ರಧಾನ ಮಂತ್ರಿಗಳಿಂದ

   (B) ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ

   (C) ರಾಜ್ಯಪಾಲರಿಂದ

   (D) ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ

5. ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಇತರೆ ಸವಲತ್ತುಗಳನ್ನು ನಿರ್ಧರಿಸುವವರು

(A) ರಾಷ್ಟ್ರಪತಿಗಳು

(B) ಪ್ರಧಾನ ಮಂತ್ರಿಗಳು

(C) ಸಂಸತ್ತು

(D) ರಾಜ್ಯಪಾಲರು

6. ರಾಜ್ಯ ಕಾರ್ಯಾಂಗದ ನೈಜ ಮುಖ್ಯಸ್ಥರು

(A) ಸಭಾಪತಿ

(B) ರಾಜ್ಯಪಾಲರು

(C) ಮುಖ್ಯ ಮಂತ್ರಿ

(D) ಅಡ್ವಕೇಟ್ ಜನರಲ್

7. ಹಣಕಾಸು ಮಸೂದೆಯನ್ನು ವಿಧಾನ ಪರಿಷತ್ತು ತಡೆಹಿಡಿಯಬಹುದಾದ ಗರಿಷ್ಠ ಅವಧಿ

(A) 14 ದಿನಗಳು

(B) 10 ದಿನಗಳು

(C) 15 ದಿನಗಳು

(D) 12 ದಿನಗಳು

8. ನ್ಯಾಯ ವಿತರಣೆಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಸ್ಥಾಪಿಸಲಾದ ನ್ಯಾಯಾಲಯ

(A) ಜಿಲ್ಲಾ ನ್ಯಾಯಾಲಯಗಳು

(B) ಆಯುಕ್ತರ ನ್ಯಾಯಾಲಯ

(C) ಲೋಕ್ ಅದಾಲತ್

(D) ತಹಶೀಲ್ದಾರ್ ನ್ಯಾಯಾಲಯ

9. ಗ್ರಾಮೀಣ ಸ್ವಯಂ ಆಡಳಿತ ಸಂಸ್ಥೆಯ ಪ್ರಾಥಮಿಕ ಘಟಕ

   (A) ಗ್ರಾಮ ಪಂಚಾಯತ್

   (B) ತಾಲ್ಲೂಕು ಪಂಚಾಯತ್

   (C) ಜಿಲ್ಲಾ ಪಂಚಾಯತ್

   (D) ಗ್ರಾಮ ಸಭೆ

10. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಇರುವುದು

   (A) ಬೆಳಗಾವಿ

   (B) ಬೆಂಗಳೂರು

   (C) ಕಲಬುರ್ಗಿ

   (D) ಮೈಸೂರು

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರುಗಳನ್ನು ಹೇಗೆ ನೇಮಕ ಮಾಡಲಾಗುತ್ತದೆ ?

12. ರಾಜ್ಯ ಲೋಕಸೇವಾ ಆಯೋಗದ ಸದಸ್ಯರ ಅಧಿಕಾರಾವಧಿ ಎಷ್ಟು ?

13. ಜಂಟಿ ಲೋಕಸೇವಾ ಆಯೋಗಕ್ಕೆ ಒಂದು ಉದಾಹರಣೆ ಕೊಡಿ.

14. "ಗ್ರಾಮ ಪಂಚಾಯಿತಿಗಳು ಭಾರತದ ಸ್ವಾಯತ್ತ ಸರ್ಕಾರದ ತಳಹದಿಯಾಗಿವೆ." ಎಂದು ಹೇಳಿದವರು ಯಾರು ?

15. ಜಿಲ್ಲಾ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?

16. ರಾಜ್ಯ ಮುಖ್ಯ ಚುನಾವಣಾ ಆಯುಕ್ತರನ್ನು ನೇಮಕ ಮಾಡುವವರು ಯಾರು ?

17. ರಾಜ್ಯ ಮಂತ್ರಿಮಂಡಲದ ಮಂತ್ರಿಯಾಗಲು ಇರಬೇಕಾದ ಕನಿಷ್ಠ ವಯೋಮಿತಿ ಎಷ್ಟು ?

18. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದರೇನು ?

19. ಶೂನ್ಯವೇಳೆ ಎಂದರೇನು ?

20. ಮಹಾಭಿಯೋಗ ಎಂದರೇನು ?

21. ಸಮಾಜವಾದಿ ತತ್ತ್ವಗಳ ಮುಖ್ಯ ಉದ್ದೇಶವೇನು ?

22. ರಾಜ್ಯನೀತಿ ನಿರ್ದೇಶಕ ತತ್ತ್ವಗಳು ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲಿ ಹೇಗ ಪ್ರತಿಫಲನಗೊಳ್ಳುತ್ತಿವೆ ?

23. 'ಭಾರತದ ಮ್ಯಾಗ್ನೆ ಕಾರ್ಟ' ಎಂದು ಬಣ್ಣಿಸಲಾದ ಶಾಸನ ಯಾವುದು ?

24. ಮಾಹಿತಿ ಹಕ್ಕು ಕಾಯಿದೆ ಏಕೆ ಜಾರಿಗೊಳಿಸಲಾಗಿದೆ ?

III. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. 1947 ರ ಭಾರತ ಸ್ವಾತಂತ್ರ್ಯ ಕಾಯ್ದೆಯ ಸಲಹೆಗಳೇನು ?

26. ಜಾತ್ಯಾತೀತತೆಯ ನಾಲ್ಕು ತತ್ತ್ವಗಳನ್ನು ತಿಳಿಸಿ.

27. ಮೂಲಭೂತ ಹಕ್ಕುಗಳ ಲಕ್ಷಣಗಳು ಯಾವುವು ?

28. ಗಾಂಧಿ ವಾದದ ತತ್ತ್ವಗಳನ್ನು ತಿಳಿಸಿ.

29. ಮೂಲಭೂತ ಹಕ್ಕುಗಳಿಗೂ ಮತು ರಾಜ್ಯನೀತಿ ನಿರ್ದೇಶಕ ತತ್ವಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

30. ತುರ್ತು ಪರಿಸ್ಥಿತಿಯ ವಿಧಗಳನ್ನು ಹೆಸರಿಸಿ.

31. ರಾಜ್ಯಸಭೆಯ ಚುನಾವಣಾ ಅಧಿಕಾರಗಳು ಯಾವುವು ?

32. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ನೀಡಿರುವ ವಿನಾಯಿತಿಗಳು ಯಾವುವು ?

33. ರಾಜ್ಯಪಾಲರ ಹಣಕಾಸಿನ ಅಧಿಕಾರಗಳು ಯಾವುವು ?

34. ಮುಖ್ಯ ಮಂತ್ರಿಯಾಗಲು ಇರಬೇಕಾಗಿರುವ ಅರ್ಹತೆಗಳೇನು ?

35. ಒಂದು ರಾಜ್ಯಕ್ಕೆ ವಿಧಾನ ಪರಿಷತ್ ಏಕೆ ಅವಶ್ಯಕ ?

36. ಗ್ರಾಹಕ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?

37. ಉಚ್ಚ ನ್ಯಾಯಾಲಯದ ಮನವಿ ಅಧಿಕಾರಗಳನ್ನು ತಿಳಿಸಿ.

38. ಜಿಲ್ಲಾ ಪಂಚಾಯತ್‌ನ ಹಣಕಾಸಿನ ಮೂಲಗಳು ಯಾವುವು ?

39. ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ಪಟ್ಟಿಮಾಡಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಜಿಲ್ಲಾ ಪಂಚಾಯತ್‌ನ ಕಾರ್ಯಗಳನ್ನು ತಿಳಿಸಿ.

***ಅಥವಾ***

ಗ್ರಾಮ ಪಂಚಾಯತ್‌ನ ಕಾರ್ಯಗಳನ್ನು ತಿಳಿಸಿ.

41. ಸರ್ವೋಚ್ಚ ನ್ಯಾಯಾಲಯದ ಕಾರ್ಯಗಳಾವುವು ?

***ಅಥವಾ***

ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕಗಳನ್ನು ರಕ್ಷಿಸಲು ನೀಡುವ ಆಜ್ಞೆಗಳು ಯಾವುವು ?

42. ರಾಷ್ಟ್ರಪತಿಯವರ ಶಾಸನೀಯ ಅಧಿಕಾರಗಳೇನು ?

***ಅಥವಾ***

ಪ್ರಧಾನ ಮಂತ್ರಿಗಳ ಅಧಿಕಾರ ಮತ್ತು ಕಾರ್ಯಗಳೇನು ?

43. ಭಾರತೀಯ ಪೌರರಿಗೆ ನೀಡಲಾಗಿರುವ ಮೂಲಭೂತ ಹಕ್ಕುಗಳನ್ನು ಹೆಸರಿಸಿ.

***ಅಥವಾ***

ಭಾರತೀಯ ಪೌರರಿಗೆ ನೀಡಲಾಗಿರುವ ಯಾವುದಾದರೂ ಆರು ಮೂಲಭೂತ ಕರ್ತವ್ಯಗಳನ್ನು ಹೆಸರಿಸಿ.

44. ರಾಷ್ಟ್ರದ ಐಕ್ಯತೆ ಮತ್ತು ಭಾವೈಕ್ಯತೆ ಕುರಿತು ಬರೆಯಿರಿ.

***ಅಥವಾ***

ಸ್ವಾತಂತ್ರ್ಯ ಮತ್ತು ಸಮಾನತೆ ಕುರಿತು ಬರೆಯಿರಿ.

45. ಸಂವಿಧಾನ ರಚನಾ ಸಭೆಯ ಕುರಿತು ವಿವರಿಸಿ.

***ಅಥವಾ***

ಭಾರತ ಸಂವಿಧಾನದ ಯಾವುದಾದರೂ ಆರು ಲಕ್ಷಣಗಳನ್ನು ತಿಳಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಲೋಕಸಭೆಯ ಸಭಾಧ್ಯಕ್ಷರ ಅಧಿಕಾರಗಳು ಯಾವುವು ?

47. ವಿಧಾನಸಭೆಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.